Minor Irrigation Works

*Q.—262. SRI R. KENCHAPPA (Pavagada).—

Will the Government be pleased to state:—

(*a*) the number of Minor Irrigation works that have been taken up in Tumkur District for the past three years (Talukwise information may be furnished);

(*b*) among them the number of works that have been ordered to be stopped for want of funds or other reasons (Talukwise information may be furnished);

(*c*) the amount spent so far for these works and the time required to complete the incomplete works and also the works which have been ordered to be stopped?

A.—SRI ALUR HANUMANTHAPPA (Deputy Minister for Minor Irrigation).—

(*a*)—

	Name of Taluk	*No. of works taken up during last three years*
1.	Sira	80
2.	Madhugiri	85
3.	Koratagere	64
4.	Pavagada	29
5.	Chicknayakanahally	55
6.	Tumkur	111
7.	Gubbi	88
8.	Kunigal	145
9.	Turuvekere	59
10.	Tiptur	64

(*b*) No works have been ordered to be stopped.

(*c*) (i) Rs. 109,26,436.

(ii) Efforts are being made to complete the incomplete works as early as possible.

(iii) Does not arise in view of reply to clause (*b*).

ಶ್ರೀ ಆರ್. ಕೆಂಚಪ್ಪ.—ಮೂರು ವರ್ಷಗಳೇದಲೂ ಇಲ್ಲಿ ಸಣ್ಣ ನೀರಾವರಿ ಕಾರ್ಯಗಳು ಆಗದೇ ಇರಲು ಕಾರಣವೇನು?

†ಶ್ರೀ ಆಲೂರು ಹನುಮಂತಪ್ಪ.—ತುಮಕೂರು ಜಿಲ್ಲೆಯಲ್ಲಿ ಮೂರು ವರ್ಷಗಳಲ್ಲಿ ಸುಮಾರು ಒಂದು ಕೋಟಿಯಷ್ಟು ಹಣ್ಣದಲ್ಲಿ ಇರುವ ಎಲ್ಲ ಸಣ್ಣ ಕಾಮಗಾರಿಗಳನ್ನೂ ಮಾಡಬೇಕೆಂದು ಇತ್ತು. ಆದರಲ್ಲಿ ಎಷ್ಟು ಕೆಲಸಗಳಾಗಿವೆ ಎನ್ನುವುದರ ಪಟ್ಟಿ ಬೇಕಾದರೆ ಆಮೇಲೆ ಕೊಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಸಣ್ಣ ನೀರಾವರಿ ಕೆಲಸಗಳು ತುಮಕೂರಿಗೆ ಹೆಚ್ಚಾಗಿ ಆಗಬೇಕೆಂದು ನಾವು ಇಲ್ಲಿ ಪದೇ ಪದೇ ಹೇಳುತ್ತಿದ್ದರೂ ಯಾವ ಕೆಲಸಗಳೂ ಆಗುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಪಟ್ಟಿಯನ್ನು ನೋಡಿದರೆ ಕ್ರಮಗೇ ಗೊತ್ತಾಗುತ್ತದೆ. 1.84 ಲಕ್ಷ ದಷ್ಟು ಕೆಲಸಗಳಲ್ಲಿ ಸ್ಪಿಲ್‌ಓವರ್ ಆಗಿ ಈಗಾಗಲೇ ಮೂರು ವರ್ಷಗಳಲ್ಲಿ ಸುಮಾರು ಒಂದು ಕೋಟಿ ಒಂಭತ್ತು ಲಕ್ಷಗಳಷ್ಟು ಖರ್ಚು ಮಾಡಬೇಕೆಂದು ಇದ್ದುದರಲ್ಲಿ ಸುಮಾರು 84 ಲಕ್ಷ ರೂಪಾಯಿಗಳಷ್ಟು ಸ್ಪಿಲ್‌ಓವರ್ ಆಗಿದ್ದರೂ ಅದರ ಕೆಲಸಗಳನ್ನೂ ಮಾಡುತ್ತಿದ್ದಾರೆ. ಅಲ್ಲದೆ ಈಗ ಇರುವ ಕ್ಷಾಮದ ಪರಿಸ್ಥಿತಿಗಳನ್ನು ಅರಿತು ಕೊಂಡು ಹಿಂದೆ ಯಾವ ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆ ಅವನ್ನು ಪೂರ್ತಿಯಾಗಿ ಮುಗಿಸಬೇಕೆಂದು ಹೇಳಲಾಗಿದೆ. ಅದರಂತೆ ಎಲ್ಲ ಕಡೆಗಳಲ್ಲಿಯೂ ಕೆಲಸಗಳು ನಡೆಯುತ್ತಿವೆ. ಕೆಲವು ತಾಲ್ಲೂಕುಗಳಲ್ಲಿ ಸ್ಪಿಲ್ ಓವರ್ ವರ್ಕುಗಳೇ ಇಲ್ಲ. ಆದಷ್ಟು ಬೇಗ ಇರುವ ಕಾಮಗಾರಿಗಳನ್ನೂ ಪೂರ್ತಿಯಾಗಿ ಮಾಡಲು ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್. ಆರ್. ಕೇಶವ ಮೂರ್ತಿ.—ಹಾಸನ ಜಿಲ್ಲೆಯಲ್ಲಿ ಕೆಲಸಕಾರ್ಯಗಳು 1962ರಲ್ಲಿ ಆರಂಭ ಮಾಡಿದ್ದುಕೂಡ ಇನ್ನೂ ಪೂರ್ತಿಯಾಗಿ ಆಗಿಲ್ಲ. ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಬದಲಾಗಿ ಇಲ್ಲಿ ಉಳಿದಿರುವ ಕೆಲಸಗಳನ್ನು ಪೂರ್ತಿಯಾಗಿ ಮಾಡುವುದು ಒಳ್ಳೆಯದಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಹಾಸನ ಜಿಲ್ಲೆಯಲ್ಲಿ ಅಭಾವದ ಪರಿಸ್ಥಿತಿ ಇದೆ ಎಂದು ತಾವು ಹೇಳಿದ ಹಾಗೆ ಅಲ್ಲಿಯೂ ಕೂಡ ಉಳಿದಿರುವ ಕೆಲಸಗಳನ್ನು ಆದಷ್ಟು ಬೇಗ ಮಾಡಬೇಕೆಂದು ಹೇಳಲಾಗಿದೆ. ಇದಕ್ಕಾಗಿ ತಕ್ಕ ಕ್ರಮಗಳನ್ನೂ ಹಾಸನ ಜಿಲ್ಲೆಯಲ್ಲಿ ಕೈಗೊಂಡು ಅಲ್ಲಿನ ಕ್ಷಾಮ ಪರಿಸ್ಥಿತಿಯನ್ನು ಹೋಗಲಾಡಿಸಲು ತಕ್ಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಶ್ರೀ ಜಿ. ರಾಮೇ ಗೌಡ.—ಕೆಲವು ಕೆಲಸಗಳು ಎರಡು ಮೂರು ವರ್ಷಗಳ ಹಿಂದೆ ಪೂರ್ತಿಯಾಗಿ ಮುಗಿದಿದ್ದರೂ ಫೈನಲ್ ಬಿಲ್‌ಗಳು ಪಾವತಿಯಾಗದೆ ಇರುವಂತಹ ಕೆಲಸಗಳನ್ನೂ ಸ್ಪಿಲ್ ಓವರು ಎಂದು ಸೇರಿಸಿ ತೋರಿಸುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಇದರಲ್ಲಿ ಕೆಲಸಗಳು ಪೂರ್ತಿಯಾಗಿರುವುದನ್ನು ಬಿಟ್ಟು ಇತರ ಕೆಲಸ ಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಎಲ್ಲ ಕೆಲಸಗಳನ್ನೂ ಮಾಡಬೇಕೆಂದು ಸೂಚನೆ ಕೊಡಲಾಗಿದೆ. ಇದರಿಂದ ಮುಂದೆ ತೊಂದರೆಗಳು ಬರುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ತುಮಕೂರು ಜಿಲ್ಲೆಗೆ ಅಭಾವದ ಪರಿಸ್ಥಿತಿಯನ್ನು ನೋಡಲು ಬಂದಿದ್ದಾಗ ನಮ್ಮನ್ನೆಲ್ಲಾ ಕರೆಸಿಕೊಂಡು ಇಲ್ಲಿ ಯಾವ ಯಾವ ಕೆಲಸ ಕಾರ್ಯಗಳು ಆಗಬೇಕೆಂದು ಇರುವುದನ್ನು ನಿರ್ದಿಷ್ಟವಾಗಿ ತಿಳಿದುಕೊಂಡು ಬಂದಿದ್ದರೂ ಇದುವರೆಗೂ ಯಾವ ಕೆಲಸ ಕಾರ್ಯಗಳೂ ಆಗಲಿಲ್ಲ; ಮತ್ತು ಅದನ್ನು ಮಾಡುತ್ತೇವೆಂದು ಭರವಸೆಕೂಡ ಕೊಟ್ಟು ಬಂದಿದ್ದರು. ಇಲ್ಲಿ ಕೊಟ್ಟ ಲಿಖಿತದಲ್ಲಿ ಜಯ ಮಂಗಲ ನದಿಗೆ ತಿರುಕನಪಾಳ್ಯದ ಜಲಾಶಯವನ್ನು ಮಾಡಿಸಿಕೊಡಬೇಕೆಂದು ನಾವು ಸಲಹೆ ಕೊಟ್ಟಿದ್ದೆವು. ಅಲ್ಲದೆ ಜಯಮಂಗಲದಲ್ಲಿ ಹರಿಯುವ ನದಿ ನೀರೆಲ್ಲಾ ಆಂಧ್ರದ ಕಡೆಗೆ ಹರಿದು ಹೋಗುತ್ತಿದೆ. ಆದುದರಿಂದ ಈಗಲಾದರೂ ನಮ್ಮ ಭಾಗದ ಕಡೆಗೆ ತೀವ್ರವಾದ ಗಮನವನ್ನು ಕೊಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಎಲ್ಲೆಲ್ಲಿ ನೀರಾವರಿಗೆ ಸಾಧ್ಯವಿದೆಯೋ ಅಲ್ಲೆಲ್ಲಾ ಲಿಫ್ಟ್ ಇರಿಗೇಷನ್ ಕೆಲಸಗಳನ್ನು ಮಾಡಬೇಕೆಂದು ಸೂಚನೆ ಕೊಡಲಾಗಿದೆ. ಈಗಾಗಲೇ ಇಂತಹ 31 ಕೆಲಸಗಳನ್ನು ಮಾಡಲು ಮಂಜೂರಾತಿ ಕೊಡಲಾಗಿದೆ. ಅಲ್ಲದೆ ತುಮಕೂರು ಜಿಲ್ಲೆಯಲ್ಲಿ ಎಲ್ಲೆಲ್ಲಿ ಲಿಫ್ಟ್ ಇರಿಗೇಷನ್ ಮಾಡಲು ಸಾಧ್ಯವಿದೆಯೋ ಅಲ್ಲೆಲ್ಲಾ ಸಾಧ್ಯವಾದಷ್ಟು ಕೆಲಸಗಳನ್ನು ಮಾಡಬೇಕೆಂದು ಏರ್ಪಾಡು ಮಾಡಲಾಗಿದೆ. ಇದಕ್ಕಾಗಿ ಕೇಂದ್ರದವರೂ ಹಣಕಾಸಿನ ಸಹಾಯವನ್ನು ಮಾಡುತ್ತೇವೆ ಎಂದು ಭರವಸೆ ಕೂಡ ಕೊಟ್ಟಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೊದಲು ಚೀಫ್ ಇಂಜಿನಿಯರ್‌ರವರಿಗೆ ಮೂರು ಕೋಟಿಯಷ್ಟು ಹೆಚ್ಚಳದ ಹಣವನ್ನು ಖರ್ಚುಮಾಡಿ ಕೆಲಸಗಳನ್ನು ಮಾಡಬಹುದು ಎಂದು ಸೂಚನೆ ಇತ್ತು. ಆದಾದಮೇಲೆ ಸರಕಾರ ಬೇರೊಂದು ಸೂಚನೆ ಪ್ರಕಾರ ಒಂದು ಕೋಟಿಗೆ ಮೇಲ್ಪಟ್ಟು ಕೆಲಸಗಳ ಮಂಜೂರಾತಿ ಕೊಡಕೂಡದು ಎಂದು ಹೇಳಿದರು. ಹೀಗಾಗಿ ನಮ್ಮ ತುಮಕೂರು ಜಿಲ್ಲೆಯಲ್ಲಿ ಸಿರಾ ತಾಲ್ಲೂಕಿನಲ್ಲಿ ಕೆಲಸಗಳೇ ಆಗದೇ ನಿಂತು ಹೋಗಿವೆ, ಇದಕ್ಕೆ ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲಿರುವ ಎಷ್ಟೋ ಕೆಲಸಗಳು ಆಗಲೇ ಮುಗಿದು ಹೋಗಿವೆ ಮತ್ತು ಇಲ್ಲಿ ಹೊಸದಾಗಿ ಯಾವ ಕೆಲಸಗಳನ್ನೂ ಮಾಡಕೂಡದು ಮತ್ತು ಬಾಕಿ ಇರುವ ಕೆಲಸಗಳನ್ನು ಪೂರ್ತಿಯಾಗಿ ಮಾಡಬೇಕೆಂದು ಸೂಚನೆಗಳನ್ನು ಕೊಡಲಾಗಿದೆ. ಅದಕ್ಕೋಸ್ಕರ ನಿರ್ದಿಷ್ಟವಾಗಿ ಇಷ್ಟು ಹಣ ಎಂದು ಅವರಿಗೆ ಕೊಡಲಾಗಿದೆ. ತುಮಕೂರು ಜಿಲ್ಲೆಯಲ್ಲಿ ಅಥವಾ ಸಿರಾ ತಾಲ್ಲೂಕಿನಲ್ಲಿ ಯಾವ ಕೆಲಸವನ್ನೂ ತೆಗೆದುಕೊಳ್ಳ ಬೇಡಿ ಎಂದು ಹೇಳಿಲ್ಲ. ಹಳೆಯ ಕೆಲಸುಗಳನ್ನು ಬೇಗ ಮುಗಿಸಿ ಎಂದು ಹೇಳಿದೆವು. ಈಗ ಹೊಸ ಕೆಲಸ ಗಳಿಗೂ ಆದ್ಯತೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ, ಆದ್ಯತೆಯನ್ನು ಕೊಡುತ್ತಿದ್ದೇವೆ. 16 ಕೋಟಿ ರೂಪಾಯಿಗಳನ್ನು ಈ ನಾಲ್ಕು ವರ್ಷಗಳಲ್ಲಿ ಸಣ್ಣ ನೀರಾವರಿ ಯೋಜನೆಗೆ ಮತ್ತು ಕೆರೆಗಳಿಗೆ ಖರ್ಚು ಮಾಡಿದ್ದೇವೆ ಎನ್ನುವುದು ವೇದ್ಯವಾಗುತ್ತದೆ.

ಶ್ರೀ ಆರ್. ಎಸ್. ಲಕ್ಷ್ಮೀಪತಿ.—ಈಚೆಗೆ ಹಣಕಾಸಿನ ಸಚಿವರು, ಪಬ್ಲಿಕ್‌ವರ್ಕ್ಸ್ ಸಚಿವರು, ಜಿಲ್ಲೆ ಶಾಸನ ಸಭಾ ಮತ್ತು ವಿಧಾನ ಪರಿಷತ್ತಿನ ಸದಸ್ಯರೂ ಮತ್ತು ಅಧಿಕಾರಿಗಳು ಸಭೆ ಸೇರಿದ್ದಾಗ ಐದು ಲಕ್ಷ ರೂಪಾಯಿ ಕೆಲಸವಿದ್ದರೆ ಅದನ್ನು ತೆಗೆದುಕೊಳ್ಳಬೇಡಿ ಎಂದು ಆದೇಶ ಕೊಟ್ಟಿದ್ದಾರೆ. ಅನೇಕ ತಾಲ್ಲೂಕುಗಳಲ್ಲಿ ಟಿಕ್ಕಿಕಲ್ ಡಿಫೆಕ್ಟ್ಸ್ ಮತ್ತು ಇತರ ಕೆಲವು ಕಾರಣಗಳಿಂದ ಸ್ಟಿಲ್ ಓವರ್ ವರ್ಕ್ಸ್‌ನಲ್ಲಿ ಸೇರಿರುತ್ತವೆ. ಅಲ್ಲದೆ ಒಂದೊಂದು ಕೆಲಸ ತಾಲ್ಲೂಕಿನ ಮೂಲೆಯಲ್ಲಿರುತ್ತದೆ. ಈಗ ಕ್ಷಾಮ ಪರಿಸ್ಥಿತಿ ಇರುವುದರಿಂದ ಅಲ್ಲಲ್ಲಿ ಹೆಚ್ಚು ಜನ ಕೂಲಿಗಾರರಿಗೆ ಅನುಕೂಲವಾಗುವಂತೆ ಹೆಚ್ಚು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಆದೇಶ ಕೊಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ನಾವು ಸೀಲಿಂಗ್ ಏನೂ ಇಟ್ಟಿಲ್ಲ. ಗೌರಿಬಿದನೂರು ತಾಲ್ಲೂಕಿನಲ್ಲಿ ಹೆಚ್ಚಿನ ಸ್ಟಿಲ್ ಓವರ್ ವರ್ಕ್ಸ್ ಇವೆ. ಇವತ್ತಿನ ಪರಿಸ್ಥಿತಿಯಲ್ಲಿ ಗೌರಿಬಿದನೂರು ತಾಲ್ಲೂಕಿನಲ್ಲಿ ಕ್ಷಾಮ ಪರಿಸ್ಥಿತಿ ಇದೆ ಎನ್ನುವುದು ಸರ್ಕಾರಕ್ಕೆ ಮನದಟ್ಟಾಗಿದೆ. ಅದಕ್ಕೋಸ್ಕರ ಅಲ್ಲಿ ಮಾಡಬೇಕಾದ ಅತ್ಯಾವಶ್ಯಕವಾದ ಮತ್ತು ಮುಖ್ಯವಾದ ಕೆಲಸಗಳ ಪಟ್ಟಿಯನ್ನು ಮಾಡಿಕೊಂಡಿದ್ದೇವೆ ; ಮತ್ತು ಅವುಗಳನ್ನು ತೆಗೆದುಕೊಳ್ಳಬೇಕೆಂದು ಹಣಕಾಸಿನ ಮಂತ್ರಿಗಳೂ ಮತ್ತು ಪಬ್ಲಿಕ್ ವರ್ಕ್ಸ್ ಮಂತ್ರಿಗಳೂ ಎಲ್ಲ ಸೇರಿ ತೀರ್ಮಾನ ಕೈಕೊಂಡಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಅನೇಕಸಾರಿ ಮತ್ತು ಹೊರಗಡೆ ಭರವಸೆಯನ್ನು ಹೇಳಿದರು. ಆಂಧ್ರಕ್ಕೆ ಜಯಮಂಗಲ ನದಿಯಿಂದ ನೀರು ಹರಿದುಹೋಗುತ್ತಿದೆ. ಇಲ್ಲಿ ಜಲಾಶಯವನ್ನು ಕಟ್ಟಬಾರದು ಎನ್ನುವ ಆತಂಕವನ್ನು ಆಂಧ್ರದವರು ವ್ಯಕ್ತಪಡಿಸಿದ್ದಾರೆ. ಈ ಜಲಾಶಯವನ್ನು ಕೊರಟಗೆರೆ ತಾಲ್ಲೂಕಿನಲ್ಲಿ ನಿರ್ಮಿಸಲು ಅಂದಾಜಾಗಿ ಬಹಳ ವರ್ಷಗಳಾಗಿವೆ. ಆ ಬಗ್ಗೆ ಈ ವರ್ಷದ ಬಜೆಟ್ಟಿನಲ್ಲಿ ಟೋಕನ್ ಗ್ರಾಂಟ್ ಕೊಟ್ಟು ಕೆಲಸವನ್ನು ಪ್ರಾರಂಭಮಾಡುವ ಭರವಸೆಯನ್ನು ಕೊಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಜಯಮಂಗಲ ಜಲಾಶಯಕ್ಕೆ 15 ಲಕ್ಷ ರೂಪಾಯಿಗಳ ಅಂದಾಜು ತಯಾರಾಗಿದೆ. ದೊಡ್ಡ ಜಲಾಶಯವನ್ನು ಕಟ್ಟುವುದಕ್ಕೆ ಬದಲು ಮೂರು ನಾಲ್ಕು ಸಣ್ಣ ಕೆರೆಗಳನ್ನು ಕಟ್ಟುವುದು ಒಳ್ಳೆಯದು ಎನ್ನುವ ಅಭಿಪ್ರಾಯವಿದೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

Dispute under Industrial Disputes Act

*Q.—290. SRI A. J. DODDAMETI (Ron).—

Will the Government be pleased to state :—

(*a*) whether an award has been passed in the case No. 10/1964 by the Industrial Tribunal in the dispute under Industrial Disputes Act, in case of Thungabhadra Project Circle Workers *Vs* " Management of the Superintending Engineer, P.W.D., T.P. Circle, Munirabad " ;

(*b*) if so, whether the award has been implemented and on what date ;

(*c*) if not, why not ?

A.—SRI D. DEVARAJ URS (Minister for Transport and Tourism).—

(*a*) Yes.

(*b*) The award has not been implemented.

(*c*) It is ascertained that the Superintending Engineer, P.W.D., T.P. Circle, Munirabad, is awaiting the orders of the competent authority to implement the Award. The Chief Engineer, Irrigation Projects, Munirabad has been requested by Government to implement the Award.

ಶ್ರೀ ಎ. ಜೆ. ದೊಡ್ಡಮೇಟಿ.—ತೀರ್ಪುಕೊಟ್ಟ ದಿನಾಂಕ ಯಾವುದು ?

†ಶ್ರೀ ಡಿ. ದೇವರಾಜ್ ಅರಸ್.—ಅವಾರ್ಡ್ ಪ್ರಕಟವಾದ ತಾರೀಖು 10.7.1965.

ಶ್ರೀ ಎ. ಜೆ. ದೊಡ್ಡಮೇಟಿ.—ಈ ತೀರ್ಪಿನ ಪರಿಣಾಮಕ್ಕೆ ಒಳಪಡುವ ಕೆಲಸಗಾರರ ಸಂಖ್ಯೆ ಎಷ್ಟು ?